O.S. ನಂಬರಃ 78/2017
ಪಿ. ಡಬ್ಲ್ಯೂಃ 1

ದಿಃ 13-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

3. ಸಾಮಾನ್ಯವಾಗಿ ಹಿಂದೂ ಸಮಾಜದಲ್ಲಿ ಯಾವುದಾದರೂ ಒಂದು ಕುಟುಂಬದಲ್ಲಿ ಆ ಕುಟುಂಬದ ಅಜ್ಜ ಮೃತಪಟ್ಟರೆ ಆತನ ನೆನಪಿಗಾಗಿ ಆತನ ಹೆಸರನ್ನು ಮೊಮ್ಮಗನಿಗೆ ಇಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗೋವಿಂದ ರಾಮಯ್ಯ ಶೆಟ್ಟಿ ಎನ್ನುವ ವ್ಯಕ್ತಿಯ ಅಸ್ತಿತ್ವ ಮತ್ತು ವಾಸ್ತವ್ಯದ ಬಗ್ಗೆ ದಾಖಲೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಸ್ವತಃ ಗೋವಿಂದ ರಾಮಯ್ಯ ಶೆಟ್ಟಿ ಮತ್ತು ಗೋವಿಂದ ಅನಂತ ಶೆಟ್ಟಿ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರು ಅಲಗೇರಿ ಇಲ್ಲಿ ವಾಸವಿರುತ್ತಾರೆ. ಅವರು ಸ್ವಂತ ಮನೆಯಲ್ಲಿ ವಾಸವಿದ್ದರೂ ಅಥವಾ ಬಾಡಿಗೆ ಮನೆಯಲ್ಲಿ ವಾಸವಿದ್ದರೋ ಎಂದು ನನಗೆ ಮಾಹಿತಿ ಇರುವುದಿಲ್ಲ. ಗೋವಿಂದ ಅನಂತ ಶೆಟ್ಟಿ ಇವರು ತನ್ನ ಕುಟುಂಬ ಹಾಗೂ ಮಕ್ಕಳೊಂದಿಗೆ ಅಲಗೇರಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಗೋವಿಂದ ಅನಂತ ಶೆಟ್ಟಿ ಇವರಿಗೆ ಮಕ್ಕಳು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅಲಗೇರಿಯಲ್ಲಿ ಗೋವಿಂದ ಅನಂತ ಶೆಟ್ಟಿ ಮತ್ತು ನಾಗಮ್ಮ ಗೋವಿಂದ ಶೆಟ್ಟಿ ಇವರು ಇಬ್ಬರೂ ಮಾತ್ರ ವಾಸವಿದ್ದರು.

ಗೋವಿಂದ ಅನಂತ ಶೆಟ್ಟಿ ಇವರ ಹೆಂಡತಿ ಗೋಕರ್ಣದಲ್ಲಿ ವಾಸವಿದ್ದರು. ಕಲ್ಯಾಣಿ, ಮಗ ಅನಂತ ಹಾಗೂ ಮಗಳು ಲಲಿತ ಇವರು ಗೋಕರ್ಣದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಗೋವಿಂದ ಅನಂತ ಶೆಟ್ಟಿ ಇವರನ್ನು ನಾನು ನೋಡಿರುವುದಿಲ್ಲ. ಕಲ್ಯಾಣಿ ಅನಂತ ಶೆಟ್ಟಿ ಇವರನ್ನೂ ಸಹ ನಾನು ನೋಡಿರುವುದಿಲ್ಲ. ಕಲ್ಯಾಣಿ ಗೋವಿಂದ ಶೆಟ್ಟಿ ಇವರು 1966 ನೇ ಸಾಲಿನಲ್ಲಿ ಮೃತರಾಗಿರುತ್ತಾರೆ. ನಾನು 1966 ನೇ ಸಾಲಿನಲ್ಲಿ ಹುಟ್ಟಿರುತ್ತೇನೆ. ಗೋವಿಂದ ಶೆಟ್ಟಿ ಇವರ ತಂದೆಯ ಹೆಸರು ರಾಮಯ್ಯ ಅಥವಾ ಅನಂತ ಎಂದು ಎರಡು ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಗೋವಿಂದ ತಂದೆ ರಾಮಯ್ಯ ಅಥವಾ ಅನಂತ ಎಂದು ಎರಡೂ ಹೆಸರಿನಿಂದ ಕರೆಯುತ್ತಿದ್ದು, ಅದು ಅಲ್ಲ ಎಂದು ನೀವು ಯಾವ ಆಧಾರದಲ್ಲಿ ಹೇಳುತ್ತಿದ್ದೀರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ಯಾವುದೇ ದಾಖಲೆಗಳಲ್ಲಿ ಆ ರೀತಿ ಉಲ್ಲೇಖ ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಹೆಸರು ರೆಕಾರ್ಡ ಉತಾರ, ವಾರಸಾ ಇತ್ಯಾದಿ ದಾಖಲೆಗಳಲ್ಲಿ ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಾನು 2014 ನೇ ಸಾಲಿನ ನಂತರದ ಹಾಗೂ ಅದಕ್ಕಿಂತ ಪೂರ್ವದ ಎಲ್ಲಾ ದಾಖಲೆಗಳನ್ನು ತೆಗೆದು ನೋಡಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ 2014 ರ ಪೂರ್ವದ ಅಥವಾ ನಂತರ ಸಾಲಿನ ಯಾವುದೇ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೇ ಗೋವಿಂದ ತಂದೆ ರಾಮಯ್ಯ ಯಾನೆ ಅನಂತ ಶೆಟ್ಟಿ ಅಲ್ಲ ಎಂದು ಸುಳ್ಳು ಪ್ರತಿಪಾದಿಸುತ್ತಿದ್ದೇನೆ ಎಂದರೆ ಸರಿಯಲ್ಲ.

ಹೇಗಾದರೂ ಮಾಡಿ, ದಾವಾ ಆಸ್ತಿಯನ್ನು ಲಪಟಾಯಿಸಬೇಕು ಎನ್ನುವ ದುರುದ್ದೇಶದಿಂದ ಗೋವಿಂದ ತಂದೆ ಅನಂತ ಯಾನೆ ರಾಮಯ್ಯ ಶೆಟ್ಟಿ ಅಲ್ಲ ಎಂದು ಸುಳ್ಳು ಹಕ್ಕು ಸಾಧಿಸುತ್ತಾ ಇದ್ದೇನೆ ಎಂದರೆ ಸರಿಯಲ್ಲ. ಕಲ್ಯಾಣಿ ಇವರು ಮೃತಪಟ್ಟ ನಂತರ ವಾರಸಾ ಎಂಟ್ರಿ 1994 ರಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಕಲ್ಯಾಣಿ 1966 ರಲ್ಲಿ ಮೃತಪಟ್ಟಿದ್ದು, 1994 ರಲ್ಲಿ ಬೋಗಸ್ ರೀತಿಯಿಂದ ವಾರಸಾ ಎಂಟ್ರಿ ಮಾಡಿಕೊಂಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ವಾರಸಾ ಎಂಟ್ರಿಯನ್ನು ನಾನು ನೋಡಿರುತ್ತೇನೆ. ಸದರಿ ವಾರಸಾ ಎಂಟ್ರಿಯನ್ನು ಕಂದಾಯ ನಿರೀಕ್ಷಕರು ಸರ್ಟಿಪೈ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಕಂದಾಯ ನಿರೀಕ್ಷಕರು ವಾರಸಾ ಮಂಜೂರು ಮಾಡಿದ್ದು ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಾರಸಾ ಎಂಟ್ರಿ ಬಗ್ಗೆ ನನಗೆ ಈ ದಾವೆಯನ್ನು ದಾಖಲು ಮಾಡಿದ ನಂತರ ತಿಳಿದು ಬಂದಿರುತ್ತದೆ. ನಮಗೆ ವಿಲ್‌ನಾಮೆ ಪ್ರಕಾರ ಆಸ್ತಿ ಬರಬೇಕು ಎಂದು ನಾನು ಮಾಗಣೆಯನ್ನು ಮಾಡಿರುತ್ತೇನೆ. ಸದರಿ ವಿಲ್ನಾಮೆ ಪ್ರಕಾರ ಈಗ ಇರುವ ಎಂಟುವರೆ ಗುಂಟೆ ಜಮೀನಿನಲ್ಲಿ ನಮಗೆ ಹಕ್ಕು ಬರಬೇಕಾಗುತ್ತದೆ. ಇನ್ನೊಂದು ಎಂಟುವರೆ ಗುಂಟೆ ಜಮೀನನ್ನು ನನ್ನ ತಂದೆಯವರು ಖರೀದಿಗೆ ತೆಗೆದುಕೊಂಡಿದ್ದು, ಆ ಪ್ರಕಾರ ನೊಂದಾಯಿತ ಖರೀದಿ ಪತ್ರ ಆಗಿರುತ್ತದೆ. 2002 ನೇ ಸಾಲಿನಲ್ಲಿ ನನ್ನ ತಂದೆ ಎಂಟುವರೆ ಗುಂಟೆ ವಿಸ್ತೀರ್ಣದ ಜಮೀನನ್ನು ದಾವೆ ಸರ್ವೆ ನಂಬರಿನಲ್ಲಿ ಖರೀದಿ ಮಾಡಿರುತ್ತಾರೆ. ನಾನು ಆಧರಿಸುವಂತ ವಿಲ್‌ನಾಮೆಯನ್ನು ನಾಗಮ್ಮ ಗೋವಿಂದ ಶೆಟ್ಟಿಯವರು ಬರೆದಿರುತ್ತಾರೆ. ನಾವು ಜಮೀನನ್ನು ನಾಗಮ್ಮ ಗೋವಿಂದ ಶೆಟ್ಟಿ ಇವರಿಂದ ಖರೀದಿ

ಮಾಡಿರುತ್ತೇವೆ. ನಾಗಮ್ಮ ಇವರು ಬರೆದುಕೊಟ್ಟ ಮೊಕ್ತಿಯಾರನಾಮೆ ಪತ್ರದ ಆಧಾರದಂತೆ ಖರೀದಿ ಪತ್ರ ಮಾಡಲಾಗಿರುತ್ತದೆ. ಮೊಕ್ತಿಯಾರನಾಮೆ ಪತ್ರವನ್ನು ನನ್ನ ತಂದೆ ಗುಣವಂತ ಲಾಲು ಗಾಂವಕರ ಇವರಿಗೆ ಬರೆದುಕೊಟ್ಟಿದ್ದರು. ಸದರಿ ಮೊಕ್ತಿಯಾರನಾಮೆ ಪತ್ರವನ್ನು ನಾನು ಹುಡುಕಾಡಿದ್ದು, ಅದು ಸಿಕ್ಕಿರುವುದಿಲ್ಲ. ಸದರಿ ಮೊಕ್ತಿಯಾರನಾಮೆ ಪತ್ರವನ್ನು ಖರೀದಿ ಪತ್ರ ನೊಂದಣಿ ಕಾಲಕ್ಕೆ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಹಾಜರುಪಡಿಸಿರುವ ಬಗ್ಗೆ ನಮ್ಮ ತಂದೆಗೆ ಮಾಹಿತಿ ಇರುತ್ತದೆ, ನನಗೆ ಮಾಹಿತಿ ಇರುವುದಿಲ್ಲ. ಖರೀದಿ ಪತ್ರವನ್ನು ನೊಂದಣಿ ಮಾಡುವ ಕಾಲಕ್ಕೆ ನನ್ನ ತಂದೆ ಹಾಗೂ ನಾಗಮ್ಮ ಇವರು ಉಪನೊಂದಣಾಧಿಕಾರಿಗಳ ಕಚೇರಿಗೆ ತೆರಳಿದ್ದರು. ಸದರಿ ದಸ್ತಾವೇಜಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಬಹಳ ವರ್ಷವಾಗಿರುತ್ತದೆ ಎಂದು ನುಡಿಯುತ್ತಾರೆ. ಖರೀದಿ ಪತ್ರಕ್ಕೆ ಖರೀದಿದಾರರು ಸಹಿ ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಪೈಕಿ ಎಂಟುವರೆ ಗುಂಟೆ ವಿಸ್ತೀರ್ಣದ ಜಮೀನನ್ನು ಖರೀದಿ ಮಾಡುವ ಸಮಯಕ್ಕೆ ನನ್ನ ತಂದೆಯವರು ದಾವಾ ಆಸ್ತಿ ದಾಖಲೆಗಳನ್ನು ಪರಿಶೀಸಿಲಿಸಿರುತ್ತಾರೋ ಇಲ್ಲವೊ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನನ್ನ ತಂದೆಯವರಿಗೆ ಮಾಹಿತಿ ಇರುತ್ತದೆ ಎಂದು ನುಡಿಯತ್ತಾರೆ. ದಾವಾ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ. ದಾವಾ ಆಸ್ತಿಯ ಖರೀದಿದಾರರು ಆಗಿ ನೀವು ಏನಾದರೂ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಪರಿಶೀಲಿಸಿರುತ್ತೀರೋ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ನನ್ನ ತಂದೆಯವರಿಗೆ

ಆ ಬಗ್ಗೆ ಎಲ್ಲ ಮಾಹಿತಿ ಇದ್ದು, ಅವರೇ ಎಲ್ಲ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ದಾವಾ ಆಸ್ತಿ ಪೈಕಿ ಎಂಟುವರೆ ವಿಸ್ತೀರ್ಣದ ಜಮೀನನ್ನು ಖರೀದಿಸುವ ಪೂರ್ವದಲ್ಲಿ ನಾನು ಸ್ವತಃ ದಾಖಲೆಗಳನ್ನು ಖುದ್ದಾಗಿ ನೋಡಿರುವುದಿಲ್ಲ.

4. ವಾದಿಯರು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾ ಜಮೀನು ರೈತಾಬಿ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ದಾಖಲಾತಿಗಳಲ್ಲಿ ನಾಗಮ್ಮ ಗೋವಿಂದ ಶೆಟ್ಟಿ ಮತ್ತು ಕಲ್ಯಾಣಿ ಗೋವಿಂದ ಶೆಟ್ಟಿ ಎಂಬುವವರ ಹೆಸರು ಮೂಲ ವ್ಯವಸಾಯಗಾರರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಂತರ ಭೂ ಸುಧಾರಣಾ ಕಾಯ್ದೆ ಜಾರಿಗೆ ಬಂದಂತಹ ಸಮಯದಲ್ಲಿ ನಾಗಮ್ಮ ಮತ್ತು ಕಲ್ಯಾಣಿ ಇವರು ಅಧಿಭೋಗದ ಹಕ್ಕು ಕೋರಿ ಭೂ- ನ್ಯಾಯಮಂಡಳಿಗೆ ಅರ್ಜಿಯನ್ನು ನಮೂನೆ-7 ರಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಂತರ ಭೂ-ನ್ಯಾಯಾಮಂಡಳಿಯಲ್ಲಿ ವಿಚಾರಣೆಯಾಗಿ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭೂ-ನ್ಯಾಯಮಂಡಳಿಯು ನಾಗಮ್ಮ ಮತ್ತು ಕಲ್ಯಾಣಿ ಇವರಿಗೆ ಅಧಿಬೋಗದ ಹಕ್ಕನ್ನು ಮಂಜೂರು ಮಾಡಿದ್ದು, ನಂತರ ಅವರುಗಳ ಹೆಸರುಗಳನ್ನು ನಮೂನೆ-10 ರಂತೆ ಹಕ್ಕುಪತ್ರ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಭೂ-ನ್ಯಾಯಮಂಡಳಿಯ ಆದೇಶದಂತೆ ಕಲ್ಯಾಣಿ ಹಾಗೂ ನಾಗಮ್ಮ ಇವರ ಹೆಸರುಗಳು ಕಂದಾಯ ದಾಖಲಾತಿಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

ಭೂ–ನ್ಯಾಯಮಂಡಳಿಯ ಆದೇಶದ ವಿರುದ್ಧ ರಿಟ್ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಈ ರೀತಿ ಕಲ್ಯಾಣಿ ಮತ್ತು ನಾಗಮ್ಮ ಇವರಿಗೆ ದಾವಾ ಆಸ್ತಿಗಳಲ್ಲಿ ಹಕ್ಕು ಪ್ರಾಪ್ತವಾಗಿರುತ್ತದೆ ಎಂದರೆ ಸರಿ. ಆ ಕಾರಣದಿಂದ ದಾವಾ ಆಸ್ತಿಗಳಲ್ಲಿ ಸದರಿ ನಾಗಮ್ಮ ಇವರಿಗೆ ಒಬ್ಬರಿಗೆ ಮಾತ್ರ ಸಂಪೂರ್ಣ ಹಕ್ಕು ಹಿತಾಸಕ್ತಿ ಇರುವುದಿಲ್ಲ, ಕಲ್ಯಾಣಿ ಇವರಿಗೂ ಸಹ ಹಕ್ಕು ಹಿತಾಸಕ್ತಿ ಇರುತ್ತದೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಲ್ಯಾಣಿ ಹಾಗೂ ನಾಗಮ್ಮ ಇವರ ಮಧ್ಯ ಯಾವುದೇ ಸರಸ ನಿರಸ ವಾಂಟಣಿ ಆಗಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

<u>ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.